ದೋಸೆ, ಪೂರಿ ಮಾಡಿ ಎಷ್ಟು ದಿನಗಳಾದವು ಗೊತ್ತಾ?'

'ಯಾಕೋ, ಭಾನುವಾರಗಳಲ್ಲಿ ಮಾಡಲ್ವೇನೋ?'

'ಭಾನುವಾರ ನಾವು ಏಳೋದೇ ಲೇಟು. ಸರಿ ಅವತ್ತು ರೆಡಿಯಾಗಿ ಹೊರಗೆ ಹೊರಟರೆ ಬರೋದೇ ರಾತ್ರಿ...'

ಅವನ ಮಾತು ಕೇಳಿ ಜಾನಕಮ್ಮ ಜೋರಾಗಿ ನಕ್ಕರು.

'ಯಾಕಮ್ಮ ನಗ್ತಾ ಇದ್ದೀಯಾ?'

'ಮಸಾಲ ದೋಸೆ, ಪೂರಿ ಸಾಗು ಭಾನುವಾರ ಬೆಳಿಗ್ಗೇನೆ ಮಾಡಬೇಕು ಅನ್ನುವ ರೂಲ್ಸ್ ಇದೆಯಾ? ಯಾವತ್ತಾದರೂ ರಾತ್ರಿ ಮಾಡಕ್ಕೆ ಹೇಳು. ಶನಿವಾರ ರಾತ್ರಿ ಮಾಡಬಹುದಲ್ವಾ? ನೀನೂ ಜವಾಬ್ದಾರಿ ತಿಳಿದುಕೊಂಡು ಸಣ್ಣಪುಟ್ಟ ಕೆಲಸ ಮಾಡಿಕೊಡು. ಸಂಧ್ಯಾಗೂ ಖುಷಿಯಾಗತ್ತೆ.'

'ಅಮ್ಮ, ಒಂದು ರೌಂಡ್ ಹೊರಗೆ ಹೋಗಿ ಬರ್ತೀನಿ.'

'ಹೋಗಿ ಬಾ. ಎಲ್ಲೂ ಊಟಕ್ಕೆ ನಿಲ್ಲಬೇಡ.'

ಮಧ್ಯಾಹ್ನ ಊಟವಾಗುತ್ತಿದ್ದಂತೆ ಮೋಹನ ಹೇಳಿದ. 'ಆದಿಶೆಟ್ರ ಮಗ ಸದಾನಂದ ಬೆಂಗಳೂರಿಗೆ ಹೊರಟಿದ್ದಾನೆ. ನಾನು ಹೊರಡ್ತೀನಮ್ಮ.'

'ಇವತ್ತು ಇರಬಾರದಾ?' ಸತ್ಯಮೂರ್ತಿ ಕೇಳಿದರು.

'ಕಾರ್ ಸರ್ವೀಸ್‌ಗೆ ಕೊಟ್ಟಿದ್ದೀನಿ. ತರಬೇಕಪ್ಪ. ಇಲ್ಲದಿದ್ದರೆ, ಸೋಮವಾರ ಆಫೀಸ್‌ಗೆ ಹೋಗಲು ಕಷ್ಟವಾಗತ್ತೆ.'

ಜಾನಕಮ್ಮ ಅವನನ್ನು ತಡೆಯಲಿಲ್ಲ.

'ಜಾನಕಿ ಅವನ ಕೈಲಿ ಹಪ್ಪಳ, ಸಂಡಿಗೆ, ಉಪ್ಪಿನಕಾಯಿ ಏನೂ ಕಳಿಸಲಿಲ್ಲವಲ್ಲೇ...'

'ಕಳಿಸಿದರಾಯ್ತು ಬಿಡಿ' ಎಂದರು ಜಾನಕಮ್ಮ ನಿರಾಳವಾಗಿ.

***

ಮಧ್ಯಾಹ್ನದ ನಿದ್ರೆ ಮುಗಿಸಿ ಸತ್ಯಮೂರ್ತಿ ಕಾಫಿ ಕುಡಿಯುತ್ತಾ ಕುಳಿತಿದ್ದಾಗ ಸಂಧ್ಯಾ, ಮಕ್ಕಳು ಬಂದರು.

'ಅರೆ, ಇದೇನಮ್ಮ... ಈಗ ಬರ್ತಿದ್ದೀಯಾ? ನಿನ್ನ ಗಂಡ ಮಧ್ಯಾಹ್ನಾನೇ ಹೊರಟ.'

'ಮಕ್ಕಳು ಹಳ್ಳಿಗೆ ಹೋಗೋಣಾಂತ ಹಟ ಮಾಡಿದರು. ಅದಕ್ಕೆ ಕರೆದುಕೊಂಡು ಬಂದೆ.'

'ಒಳ್ಳೆಯದಾಯ್ತು...' ಎಂದರು ಸತ್ಯಮೂರ್ತಿ.

ಅನಿರುದ್ಧ ಓಡಿ ಬಂದು ತಾತನ ತೊಡೆ ಏರಿದ. ಅಲಕಾ 'ಅಜ್ಜಿ' ಎಂದು ಕೂಗುತ್ತಾ ಅಡುಗೆ ಮನೆಗೆ ಹೋದಳು.

'ಹೋಗಿ ಕೈ ಕಾಲು ತೊಳೆದುಕೊಂಡು ಬನ್ನಿ. ಮಸಾಲ ದೋಸೆ ಮಾಡ್ತೀನಿ.'

ದೋಸೆ, ಕಾಫಿಯ ಕಾರ್ಯಕ್ರಮ ಮುಗಿದ ಮೇಲೆ ಸತ್ಯಮೂರ್ತಿ ಮಕ್ಕಳನ್ನು ಕರೆದುಕೊಂಡು ದೇವಸ್ಥಾನಕ್ಕೆ ಹೊರಟರು.

'ತಾತ ಐಸ್‌ಕ್ರೀಂ ಕೊಡಿಸಬೇಕು' ಎಂದ ಅನಿರುದ್ಧ.

'ತಾತ ನನಗೂ...' ಎನ್ನುತ್ತಾ ಅಲಕಾ ತಾತನ ಕೈ ಹಿಡಿದುಕೊಂಡಳು.



ಅತ್ತೆ–ಸೊಸೆ ಹಾಲ್‌ನಲ್ಲಿ ಕುಳಿತರು.

'ಸಂಧ್ಯಾ... ಏನು ಸಮಾಚಾರ? ಅವನು ಬೆಳಿಗ್ಗೆ ಬಂದಿದ್ದ. ನೀನು ಬರುವ ವಿಚಾರ ಹೇಳಲೇ ಇಲ್ಲ.'

'ಅವರು ಹೇಳದೇ ಬಂದಿದ್ದು. ಯಾಕೇಂತ ನಿಮಗೆ ಗೊತ್ತಿರಬೇಕಲ್ಲಾ ಅತ್ತೆ?'

'ಹೂಂ. ತುಂಬಾ ಬೇಜಾರು ಮಾಡಿಕೊಂಡಿದ್ದ. ಅವನು ತರಿಸಿದ್ದ ತಿಂಡಿ ನೀವ್ಯಾರೂ ತಿನ್ನಲಿಲ್ಲವಂತೆ?'

'ಬೆಳಿಗ್ಗೆ ಆತುರಾತುರದಲ್ಲಿ ಮಸಾಲ ದೋಸೆ ಹೇಗತ್ತೆ ತಿನ್ನೋದು? ಆರ್ಡರ್ ಮಾಡುವ ಮೊದಲು ನಮ್ಮನ್ನು ಒಂದು ಮಾತು ಕೇಳಬಹುದಿತ್ತಲ್ವಾ?'

'ನಾವಂತೂ ಮಗನ್ನ ಮುದ್ದು ಮಾಡಿದ್ದೇವೆ. ನೀನಾದ್ರೂ ಅವನನ್ನು ಸರಿ ಮಾಡಬಹುದಿತ್ತಲ್ವಾ?'

'ಹಾಗಲ್ಲ ಅತ್ತೆ.'

'ನೋಡು. ನಾನು ಮನೇಲಿರ್ತಿದ್ದೆ. ಮುದ್ದಿನ ಮಗ ನಡೆದರೆ ಸವೆದು ಹೋಗ್ತಾನೇಂತ ಬೆಳೆಸಿದೆ. ನಿಮ್ಮ ಮದುವೆಯಾಗಿ ಹದಿನಾಲ್ಕು ವರ್ಷವಾಯ್ತಲ್ಲಾ. ನೀನು ಯಾಕೆ ಅವನನ್ನು ಬದಲಾಯಿಸಲಿಲ್ಲ?'

'ಅವರಿಗೆ ಕೆಲಸ ಹೇಳಿದ್ರೆ ನೀವು–ಮಾವ ಬೇಜಾರು ಮಾಡಿಕೊಳ್ಳಬಹುದು ಅನ್ನಿಸ್ತಿತ್ತು...'

'ಮದುವೆಯಾದ ಹೊಸದರಲ್ಲಿ ಹಾಗೆ ಅನ್ನಿಸಿರಬಹುದು. ಮಕ್ಕಳಾದ ಮೇಲೆ ನಿನ್ನ ಜವಾಬ್ದಾರಿ ಹೆಚ್ಚಾದ ಮೇಲೆ ನೀನು ಅವನಿಗೆ ಕೆಲಸ ಅಭ್ಯಾಸ ಮಾಡಿಸಬೇಕಿತ್ತು. ಅವನಿಗೆ ತಿಳಿವಳಿಕೆ ಕಡಿಮೆ. ನೀನೇ ಶುಕ್ರವಾರ ರಾತ್ರಿ ಅವನಿಗೆ ಹೇಳಬಹುದಿತ್ತಲ್ವಾ? ನಾಳೆ ಇಡ್ಲಿ ತರಿಸಿ, ದೋಸೆ ತರಿಸಬೇಡೀಂತ.'

'ಹೌದು, ಹೇಳಬಹುದಿತ್ತು.'

'ನೀನು ಮಕ್ಕಳಿಗೂ ಕೆಲಸ ಕಲಿಸಿದ ಹಾಗೆ ಕಾಣಿಸ್ತಿಲ್ಲ. ದೋಸೆ ತಿಂದು ತಟ್ಟೆ ಟೇಬಲ್ ಮೇಲೆ ಬಿಟ್ಟು ಎದ್ದು ಹೋದ್ರು. ಮಕ್ಕಳಿಗೆ ಕೆಲಸ ಹೇಳು. ನೀನೊಬ್ಬಳೇ ಎಷ್ಟು ಕೆಲಸ ಮಾಡ್ತೀಯ? ನೀನೂ ಮನುಷ್ಯಳಲ್ವಾ? ಹೊರಗಡೆ, ಒಳಗಡೆ ನೀನೊಬ್ಬಳೇ ದುಡಿಯುತ್ತಿದ್ರೆ ನಾಳೆ ನೀನು ಮಲಗಿದರೆ ಯಾರು ಮಾಡ್ತಾರೆ?'

'ನಮ್ಮನೆ ಕೆಲಸ ನಾನು ಮಾಡದೆ ಯಾರು ಮಾಡ್ತಾರತ್ತೆ?'

'ಆ ಸತ್ಯ ತಿಳಿದುಕೊಂಡಿದ್ದಿದ್ದರೆ ಗಂಡನ ಮೇಲೆ ಪದೇ ಪದೇ ಯಾಕೆ ಸಿಡುಕ್ತೀಯ?'

ಸಂಧ್ಯಾ ಮಾತಾಡಲಿಲ್ಲ.

'ನಿನಗೆ ಒಬ್ಬಳಿಗೇ ಕೆಲಸ ಮಾಡಕ್ಕಾಗಲ್ಲ. ಅಸಹಾಯಕತೆಯಿಂದ ಸಿಡಿಸಿಡಿ ಅಂತೀರ್ತೀಯ. ನಿಮ್ಮ ಜಗಳ ಬೆಳೆಯುವ ಮಕ್ಕಳ ಮೇಲೆ ಎಂತಹ ಪರಿಣಾಮ ಬೀರುತ್ತೆ ಗೊತ್ತಿದೆಯಾ?'

'ನಾವು ಜೋರಾಗಿ ಜಗಳವಾಡಲ್ಲ ಅತ್ತೆ...'

'ನನಗೆ ಗೊತ್ತು, ನೀನು ಅಂತಹವಳಲ್ಲ. ನೀವಿಬ್ಬರೂ ಹೊರಗೆ ಹೋಗಿ ಕೆಲಸ ಮಾಡೋದು ಯಾಕೆ? ಸುಖವಾಗಿರಬೇಕೂಂತ ತಾನೆ?'

'ಹೌದು ಅತ್ತೆ.'

'ಕೆಲಸದವಳಿಗೆ ಬೇಕಿದ್ರೆ ಇನ್ನೊಂದು ಸಾವಿರ ಜಾಸ್ತಿ ಕೊಡು. ಅಡುಗೆಗೆ, ತಿಂಡಿಗೆ 2 ಸೆಟ್ ಪಾತ್ರೆ ಇಟ್ಟುಕೋ. ಮೋನಿಗೆ, ಮಕ್ಕಳಿಗೆ, ನಿನಗೆ 2 ಸೆಟ್ ಲಂಚ್ ಬಾಕ್ಸ್ ಇಟ್ಟುಕೋ. ನೀನು ಪದೇ ಪದೇ ಪಾತ್ರೆ ತೊಳೆಯುವುದು ತಪ್ಪುತ್ತದೆ...'

'ಆಗಲಿ ಅತ್ತೆ...'

'ನೀವು ಪರಸ್ಪರ ತಪ್ಪು ತಿಳಿದುಕೊಂಡರೆ ಸಂಸಾರ ಚೆನ್ನಾಗಿರುತ್ತೇನಮ್ಮ.'

ಸಂಧ್ಯಾ ಮೌನದ ಸ್ನೇಹ ಮಾಡಿಕೊಂಡಳು. ಮನಸ್ಸು ಅತ್ತೆಯ ಮಾತುಗಳನ್ನು ಮೆಲುಕು ಹಾಕುತ್ತಿತ್ತು.

ಮರುದಿನ ಸಂಧ್ಯಾ ಬಾಗಿಲಿಗೆ ನೀರು ಹಾಕುತ್ತಿದ್ದಾಗ ಮೋಹನ ಕಾರ್‌ನಲ್ಲಿ ಆಗಮಿಸಿದ.

'ಇದೇನು ಇಷ್ಟು ಬೇಗ...'

ಅವನು ಅವಳ ಕೈ ಹಿಡಿದು ಹೇಳಿದ. 'ನನ್ನನ್ನು ಕ್ಷಮಿಸು ಸಂಧ್ಯಾ...'

'ನೀವೇ ನನ್ನ ಕ್ಷಮಿಸಬೇಕು. ಬನ್ನಿ, ಒಳಗೆ ಹೋಗೋಣ.'

ಅಡುಗೆ ಮನೆ ಕಿಟಕಿಯಿಂದ ಮಗ–ಸೊಸೆಯನ್ನು ನೋಡುತ್ತಿದ್ದ ಸತ್ಯಮೂರ್ತಿ ಕೇಳಿದರು. 'ಇದೇನೇ ಜಾನಕಿ? ಏನು ಮಾಡಿದೆ?'

'ಅವರವರ ತಪ್ಪು ಅವರಿಗೆ ಅರಿವಾಗುವ ಹಾಗೆ ಮಾಡಿದೆ ಅಷ್ಟೆ. ಅವರು ಚೆನ್ನಾಗಿದ್ದರೆ ತಾನೆ ನಾವು ನೆಮ್ಮದಿಯಿಂದ ಇರಲು ಸಾಧ್ಯ? ಅವನೆದುರಿಗೆ ಅವನನ್ನೇ ಬೈದೆ. ಸಂಧ್ಯಾಳ ಎದುರಿಗೆ ಅವಳನ್ನೇ ಬೈದೆ...'

'ಜಾಣೆ ನೀನು. ನಿನ್ನಂತಹ ಹಿರಿಯರೊಬ್ಬರು ಮನೆಯಲ್ಲಿದ್ರೆ ಎಲ್ಲಾ ಸಂಸಾರಗಳೂ ಚೆನ್ನಾಗಿರುತ್ತವೆ...'

'ಬುದ್ಧಿ ಹೇಳೋದು ಸುಲಭ. ಆದರೆ ತಮ್ಮ ತಪ್ಪು ಅರಿತುಕೊಳ್ಳುವವರು ವಿರಳ.'

ಸತ್ಯಮೂರ್ತಿ ಮಾತಾಡಲಿಲ್ಲ. ಆದರೆ ಮನಸ್ಸು ಹೆಂಡತಿಯ ಮಾತನ್ನು ಸಮರ್ಥಿಸಿತು.

ಪ್ರತಿಕ್ರಿಯಿಸಿ: **feedback@sudha.co.in**